## 5

# ಸೌಂದರ್ಯ

ಮಾನವ ಜೀವಿಗಳು ಚಂದ್ರನ ಅಸ್ತಿತ್ವ ಮತ್ತು ಚಲನೆಗಳಿಂದ ಮಾತ್ರವಲ್ಲದೇ, ಅದರ ಸೌಂದರ್ಯದಿಂದಲೂ ಆಕರ್ಷಿಸಲ್ಪಡುತ್ತಾರೆ. ಚಂದ್ರನು ತಿಂಗಳುಗಳನ್ನು ಮತ್ತು ಸಮುದ್ರದ ಉಬ್ಬರ - ಇಳಿತಗಳನ್ನು ಕ್ರಮಪಡಿಸುವ ಪ್ರಾಯೋಜಿಕತೆಯಾಗಿ ಉಪಯೋಗಿಸಲ್ಪಡುತ್ತಾನೆ ಮತ್ತು ಭೂಲೋಕದಲ್ಲಿ ವಾಸಿಸುವವರಿಗೆ ಸೌಂದರ್ಯದ ಉದ್ದೇಶಕ್ಕಾಗಿ ಉಪಯೋಗಿಸಲ್ಪಡುತ್ತಾನೆ. ಸಹಜವಾಗಿ, ಅದು ಪ್ರಯೋಜನವಾದದ್ದಾಗಿಯೂ ಇಲ್ಲವೇ ಸುಂದರವಾದದ್ದಾಗಿಯು ಇರುವದಿಲ್ಲ, ಆದರೆ ಒಂದು ಕಾಲು ಭಾಗ ಮಿಲಿಯನ್ ದೂರದಿಂದ ಅದರ ಹಳದಿ ಬಣ್ಣದ ಅರ್ಧಚಂದ್ರಾಕೃತಿಯು ಇಲ್ಲವೇ ಅದರ ಸಂಪೂರ್ಣವಾದ ಬೆಳ್ಳಗಿನ ವೈಭವವು ಪ್ರತಿಯೊಬ್ಬರಿಗೂ, ವಿಶೇಷವಾಗಿ ಪ್ರೇಮಿಗಳಿಗೆ ಏನನ್ನೋ ಮಾಡುತ್ತದೆ. ಚಂದ್ರನನ್ನು ಮಾಡಿದಾತನು ಭೂನಿವಾಸಿಗಳಿಗೆ ವ್ಯಾವಹಾರಿಕವಾಗಿ ಮತ್ತು ಸೌಂದರ್ಯಕ್ಕಾಗಿ ತನ್ನ ಮನಸ್ಸಿನಲ್ಲಿ ಏನನ್ನಾದರೂ ಇಟ್ಟುಕೊಂಡಿರುವನೋ?

ಒಬ್ಬನು ತನ್ನ ಕಣ್ಣುಗಳನ್ನು ಚಂದ್ರನಿಂದ ಹಿಂದಿರುಗಿಸಿ ಲೋಕದ ಕಡೆಗೆ ತಿರುಗಿಸಿ ಒಂದು ಗುಲಾಬಿ ಹೂವನ್ನು ಪರೀಕ್ಷಿಸುವಾಗ, ಹಲವಾರು ಪ್ರಶ್ನೆಗಳು ಉದ್ಭವವಾಗುತ್ತವೆ. ಅದು ಹೇಗೆ ಬಂದಿತು? ಯಾಕೆ ಅದು ಅಷ್ಟು ಕ್ರಮಬದ್ಧವಾಗಿ, ಸುಂದರವಾದ ಬಣ್ಣವುಳ್ಳದ್ದಾಗಿ, ಮೃದುವಾದ ಸುಗಂಧವಾಸನೆಯುಳ್ಳದ್ದಾಗಿ ಇರುತ್ತದೆ? ವ್ಯಾವಹಾರಿಕ ಮೌಲ್ಯವಿರದಿದ್ದರೆ, ಗುಲಾಬಿ ಹೂವಿನ ನಿರ್ಮಾಣಿಕನಿಗೆ ಸೌಂದರ್ಯದ ಸಂಗತಿಗಳಿಗಾಗಿ ಮೆಚ್ಚಿಕೆಯಿರುವುದೋ? ಮಾನವರಲ್ಲಿ ಅದಕ್ಕೆ ಸಮನಾಗಿರುವ ಸಮಾಂತರತೆ, ಬಣ್ಣಗಳ ಮತ್ತು ಸುವಾಸನೆಗಳ ಭಾವನೆಗಳನ್ನು ಆತನು ಇಟ್ಟಿರುವನೋ?

ಒಬ್ಬನು ಸುಂದರವಾದ ವಸ್ತುಗಳನ್ನು ಯಾದಿ ಮಾಡಲು ಪ್ರಯತ್ನಿಸಿದರೆ, ಅವನು ಬಳಲಿ ಹೋಗುತ್ತಾನೆ. ವರ್ಜಿನಿಯಾದಲ್ಲಿಯ ಶೆನಾಂಡೋ ಕೊಳ್ಳದ ಸೇಬು ಹಣ್ಣುಗಳು ಉಪಯುಕ್ತವಾದ ಪೋಷಕಾಂಶವಾಗುವ ಎಷ್ಟೋ ಸಮಯಕ್ಕಿಂತ ಮೊದಲು, ಆ ಕೊಳ್ಳವು ಹೂವು ಬಿಡುವ ಕಾಲದಲ್ಲಿ ಕಲಾಕಾರನು ಕಲ್ಪಿಸುವದಕ್ಕಿಂತ ಹೆಚ್ಚಿನದಾಗಿರುತ್ತಿತ್ತು, ಹಾಗೆಯೇ ವಸಂತ ಋತುವಿನಲ್ಲಿ ರೊಕ್ಕಿ ಪರ್ವತಗಳಲ್ಲಿ ಗಣಿಗೆಲಸ ಮತ್ತು ದನಗಳ ದೊಡ್ಡಿಗಳಗಿಂತ ಹೆಚ್ಚಿನದಾಗಿತ್ತು. ಸೂರ್ಯೋದಯವು ಸಮುದ್ರದ ಬಳಿಯಲ್ಲಿ ಇನ್ನೊಂದು ಭೂಮಿ ಕ್ರಾಂತಿಗಿಂತ ಹೆಚ್ಚಾದದ್ದು ಇತ್ತು.[1] ನೈಟಿಂಗೇಲ ಪಕ್ಷಿಯ ಹಾಡುಗಳು, ಹೂವುಗಳ ಸುಗಂಧ ಪರಿಮಳ, ಸ್ನೇಹಿತನ ಮುಗುಳ್ನಗೆ ಮತ್ತು ಪ್ರೀತಿಸುವವನ ಕಣ್ಣಿನಲ್ಲಿಯ ಹೊಳಪು; ಇವುಗಳಲ್ಲಿ ಪ್ರತಿಯೊಂದಕ್ಕೆ ವಿವರಿಸಲಿಕ್ಕೆ ಕಷ್ಟಕರವಾದ ಆಕರ್ಷಣೆ ಇದೆ, ಆದರೆ ಪ್ರಿಯಕರವಾದದ್ದೂ ವಾಸ್ತವಿಕವಾದದ್ದೂ ಆಗಿದೆ.

“ಮಾನವನಿಗೆ ಸೌಂದರ್ಯದ ಪ್ರೇರಣೆ ಇದ್ದು, ಅದು ವ್ಯಕ್ತಿಯಿಂದ ವ್ಯಕ್ತಿಗೆ

ತೀವ್ರತೆಯಲ್ಲಿ ಅವರು ಭಿನ್ನತೆಯುಳ್ಳವರಾಗಿದ್ದರೂ, ಎಲ್ಲಾ ಜನರೊಳಗೆ ಭಿನ್ನವಾದ ಪ್ರದರ್ಶಿಸುವಿಕೆಗಳಲ್ಲಿ ಕಂಡು ಬರುತ್ತದೆ."[2] ಎಫ್. ಆರ್. ಟೆನಂಟ್ ಹೀಗೆ ಬರೆದಿದ್ದಾರೆ,

> ಟೆಲೆಸ್ಕೋಪಿಕ್‌ದ ಮತ್ತು ಮೈಕ್ರೊಸ್ಕೋಪಿಕ್‌ದ ತ್ರಾಸಿನ ಮೇಲೆ ನಕ್ಷತ್ರಗಳುಳ್ಳ ಆಕಾಶದಿಂದ ದಯಾಟೋಮದ ಸಿಲಿಸಿಯಸ್ ಅಸ್ತಿಪಂಜರದವರೆಗೆ, ಅದರ ಆಂತರಿಕ ಭಾಗಗಳಲ್ಲಿ ಹಾಗೆಯೇ ಮೇಲಿನ ಭಾಗದಲ್ಲಿ, "ನಾಚಿಕೆ ಕಾಣದ" ಹೂವುಗಳಲ್ಲಿ ಮತ್ತು "ಸಾಗರದ ಆಳವಾದ ಗುಹೆಗಳಲ್ಲಿಯ" ವಜ್ರಗಳಲ್ಲಿ, ನಿಸರ್ಗವು ಭವ್ಯವಾದದ್ದು ಇಲ್ಲವೇ ಸುಂದರವಾದದ್ದು ಆಗಿರುವುದು ಮತ್ತು ಅಪವಾದಗಳು ನಿಯಮವನ್ನು ರುಜುವಾತು ಪಡಿಸುತ್ತವೆ.[3]

ಪ್ಲಾಟೋ ಮತ್ತು ಅರಿಸ್ಟೋಟಲ್ ಇಬ್ಬರೂ ಸೌಂದರ್ಯದ ಚರ್ಚೆಯಲ್ಲಿ ತೊಡಗಿಸಿಕೊಂಡಿದ್ದರು, ಇಮ್ಮಾನುವೇಲ್ ಕಾಂಟನು "The Critique of the Aesthetical Judgement"ದ ಮೇಲೆ ಅನೇಕ ಪುಟಗಳನ್ನು ಬರೆದನು, ಅದರಲ್ಲಿ ಮನುಷ್ಯನ "ಅಭಿರುಚಿಯ ತೀರ್ಪು" "ತಿಳುವಳಿಕೆ ಇಲ್ಲವೇ ವಿವೇಚನೆ"ಯಿಂದ ಬಹಳ ತೀಕ್ಷ್ಣವಾಗಿ ಪ್ರತ್ಯೇಕಿಸಲ್ಪಡಬೇಕೆಂಬುದನ್ನು ತೋರಿಸಿದನು.[4] ಕಾಂಟನು ಹ್ಯೂಮನಿಗಿಂತ ಶುದ್ಧ ಕಾರಣಕ್ಕೆ ಕಡಿಮೆಯೇನೂ ಪ್ರತಿಷ್ಠಿಕೊಂಡಿರಲಿಲ್ಲ: ಡೇವಿಡ್ ಹ್ಯೂಮನಿಗಿಂತ ಹೆಚ್ಚಾಗಿ "ಒಳಗಿನ ನೈತಿಕ ನಿಯಮಕ್ಕೆ" ಸಮರ್ಪಿಸಿಕೊಂಡಿದ್ದನು. ಯಾವುದೇ ಮರ್ತ್ಯನಿಗಿಂತ ಹೆಚ್ಚಾಗಿ ಕಾಂಟನು "ನಕ್ಷತ್ರಭರಿತ ಆಕಾಶದ" ಸೌಂದರ್ಯದಿಂದ ಮನಸೆಳೆಯಲ್ಪಟ್ಟಿದ್ದನು ಮತ್ತು ಪ್ರಭಾವ ಹೊಂದಿದ್ದನು.

ಜೀವವು ನಿಜವಾದದ್ದಾಗಿದೆ ಮತ್ತು ಸೌಂದರ್ಯವು ನಿಜವಾದದ್ದಾಗಿದೆ. ಹೀಗೆ ಇವೆರಡರ ಸೃಷ್ಟಿ ಕರ್ತನು ಜೀವಿಸುವವನಾಗಿಯೂ ಸೌಂದರ್ಯವುಳ್ಳವನಾಗಿಯೂ ಇರುವಾತನಾಗಿದ್ದಾನೆಂದು ತಾರ್ಕಿಕವಾಗಿ ಕಂಡುಬರುತ್ತದೆ. ಮನುಷ್ಯರಿಗೆ ಮಾತ್ರವೇ ಸೌಂದರ್ಯಕ್ಕೆ ಸಂಬಂಧಿಸುವದಕ್ಕೆ ಶಕ್ತವಾದ ಗ್ರಹಿಕೆಯ ಅಂಗವಿದೆ ಎಂಬುದು ಸ್ಪಷ್ಟವಾಗಿದೆ. ಔಬರ್ನ್ ಯುನಿವರ್ಸಿಟಿಯ ಫಿಲೊಸೊಫಿ ಪ್ರೊಫೆಸರ, ವಿಲಿಯಮ್, ಎಚ್. ಡೇವಿಷ್ ಹೀಗೆ ಗಮನಿಸಿದ್ದಾರೆ: "ಮಾನವನು ಶೃಂಗರಿಸುವ ಕೇವಲ ಪ್ರಾಣಿಯಾಗಿದ್ದಾನೆ, ಮತ್ತು ಎಲ್ಲಾ ಮನುಷ್ಯರು ಅದನ್ನು ಮಾಡುತ್ತಾರೆ" ಸಾಮಾನ್ಯವಾಗಿ ಯಾವುದೇ ವ್ಯಾವಹಾರಿಕ ಮೌಲ್ಯವು ಶೃಂಗರಿಸುವ ಕಲೆಗೆ ಇಲ್ಲವೇ, ಸುಂದರವಾದ ವಸ್ತುಗಳಿಗೆ ಕೊಡಲ್ಪಡುವದಿಲ್ಲ; "ಆದರೆ ಸೌಂದರ್ಯದಲ್ಲಿ, ನಮ್ಮ ನಿರ್ಣಯದಂತೆ," "ಉದ್ದೇಶವು ಯಾವುದೇ ಉದ್ದೇಶಕ್ಕೆ ಸಂಬಂಧಿಸಿರುವದಿಲ್ಲ" ಎಂದು ಕಾಂಟ ಹೇಳಿದನು.[5] ದೇವತಾವಾದಿಗೆ ಸೌಂದರ್ಯದ ಅಸ್ತಿತ್ವವನ್ನೂ ಇಲ್ಲವೇ ಅದರ ಮೆಚ್ಚಿಕೆಯನ್ನೂ ವಿವರಿಸುವದರಲ್ಲಿ ಯಾವ ತೊಂದರೆಯೂ ಇರುವದಿಲ್ಲ, ಆದರೆ ಪರಿಣಾಮವಾದಿಯು - "ಯೋಗ್ಯರ ಉಳಿಯುವಿಕೆಯ" ತತ್ವದಿಂದ ಭಾರಗೊಂಡವನು - ಏನೂ ಹೇಳದವನಾಗಿ ಕಂಡುಬರುತ್ತಾನೆ. ತನ್ನ ತೊಂದರೆಯ ಬಗ್ಗೆ ವಿಕಾಸವಾದಿಯಾದ ಥೊಮಸ್ ಎಚ್. ಹಕ್ಷಲೀಯು ಬಹಳ ಯಥಾರ್ಥನಾಗಿದ್ದನು:

> ನಿರಾಶಾವಾದಕ್ಕೆ ವಿರುದ್ಧವಾಗಿ ನನ್ನೊಂದಿಗೆ ತೂಗುತ್ತಿರುವ ಒಂದು ಸಂಗತಿಯು ಮತ್ತು ವಿಶ್ವದ ಉದಾರತೆಯುಳ್ಳ ಒಡೆಯನಿಗಾಗಿ ಹೇಳುವಂಥದ್ದು ದೃಶ್ಯದ ಮತ್ತು ಸಂಗೀತದ ನನ್ನ ಅನುಭವಿಸುವಿಕೆಯಾಗಿದೆ. ಅಸ್ತಿತ್ವಕ್ಕಾಗಿರುವ ಹೋರಾಟದಲ್ಲಿ ಅವು ಹೇಗೆ ಸಹಾಯ ಮಾಡಿದವೆಂಬುದನ್ನು ನಾನು ಕಾಣಲಾರೆನು. ಅವು ಕೃತಜ್ಞತೆಯ ವರಗಳಾಗಿವೆ.[6]

ಪಂಡಿತನಾದ, ಪ್ರಸಿದ್ಧನಾದ ತತ್ವಜ್ಞಾನಿ, ಟೆನ್ನಂಟನು, "ಕೆಲವು ಜನರು ಆತನ ಆಲಯವನ್ನು ಸುಂದರ ದ್ವಾರದಿಂದ ಪ್ರವೇಶಿಸುವರು" ಎಂದು ಹೇಳಿದ್ದಾನೆ. ದೇವವಾದದ ಗಟ್ಟಿಯಾದ ಸ್ಥಂಭಗಳಲ್ಲಿ ಒಂದರಂತೆ ಸೌಂದರ್ಯವನ್ನು ಯಾದಿ ಮಾಡಲಿಕ್ಕೆ ಅವನು ಹಿಂಜರಿಯಲಿಲ್ಲ.

> ಸೃಷ್ಟಿಯ ಸೌಂದರ್ಯದ ವಿಶ್ವವ್ಯಾಪಕತೆಯು ಸೌಂದರ್ಯವು ಎಲ್ಲಲಿಗೂ ಒಂದೇಯಾಗಿರುವಂತೆ ಮತ್ತು ಅಂತರಂಗದ್ದಾಗಿರುವಂತೆ ಮಾತಾಡುವುದು - ನೈಸರ್ಗಿಕ ನಿಯಮದ ಏಕರೂಪಕತೆಯೊಂದಿಗೆ ಹೋಲಿಸ ಬಹುದಾದ ಸಾಮಾನ್ಯವಾಗಿ ಮಾಡುವಿಕೆಯಾಗಿದೆ, ಆ ನೈಸರ್ಗಿಕ ವಸ್ತುಗಳು ಸೌಂದರ್ಯದ ಭಾವನೆಯನ್ನು ಪ್ರಚೋದಿಸುವುದು ಚಲನೆಯ ನಿಯಮಗಳಿಗೆ ಅವರು ವಿಧೇಯರಾಗುವಂತೆ ಇಲ್ಲವೇ ಇಂತಿಂಥ ರಸಾಯನಗಳ ರಚಿಸುವಿಕೆಯಂತೆ ಇರುವುದಾಗಿದೆ.

"ದೇವರು ಗ್ರಾಮೀಣ ಪ್ರದೇಶವನ್ನು ಮಾಡಿದರೆ" ಮತ್ತು "ಮಾನವನು ಪಟ್ಟಣವನ್ನು ಮಾಡಿದರೆ ... ಈ ಸಂಗತಿಗಳ ಸಾಧ್ಯವಾದ ವಿವರಣೆಯು ನಮಗಿರುವುದು; ಆದರೆ ದೇವವಾದವು ಈ ಹೇಳಿಕೆಯಲ್ಲಿ ಇರುವಂಥದ್ದು ತಿರಸ್ಕರಿಸಲ್ಪಟ್ಟರೆ, ವಿವರಣೆಯು ಬರುವಂತೆ ಕಾಣುವದಿಲ್ಲ."[7]

---

ಟಿಪ್ಪಣಿಗಳು

[1]ಸಮುದ್ರದ ಬಳಿಯ ಸೂರ್ಯೋದಯದ ವೈಜ್ಞಾನಿಕ ವಿವರಣೆಯು ಅಪೇಕ್ಷಿಸಲು ಕೆಲವೊಂದನ್ನು ಬಿಡುತ್ತದೆ: "ಭೂಮಿಯು ತನ್ನ ಸ್ಪರ್ಶರೇಖೆಯ ಸಮತೋಲವನ್ನು ಕಂಡು ಕೊಳ್ಳುವವರೆಗೆ solar ajimuthದೊಂದಿಗೆ ಇನ್ನೊಂದು ಸಲ ಸುತ್ತುವುದು." [2]Loren Eiseley, *The Immense Journey* (New York: Random House, 1962), 65. [3]F. R. Tennant, *Philosophical Theology* (Cambridge: University Press, 1930; reprint, 1956), 2:91-92. [4]Immanuel Kant, "Critique of Judgement," in *Kant Selections*, ed. Theodore Meyer Greene (New York: Charles Scribner's Sons, 1957), 387. [5]Ibid., 408. [6]Thomas H. Huxley, *Collected Essays,* vol. 2, *Darwiniana* (Westport, Conn.: Greenwood Publishing Group, 1970), 478. [7]Tennant, 2:91-92.

© 2009 Truth for Today